ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಕರ್ನಾಟಕ ಕೃಷಿ ಇಲಾಖೆ

ಸಮಗ್ರ ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು-೬೫

ಯಡಿಯೂರು ಹೋಬಳಿಯಲ್ಲಿ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: **06.05.2014**

ಈ ವಾರದ ಮುನ್ಸೂಚನೆ (ದಿನಾಂಕ **7-05-14 to 11.05.14** ವರೆಗೆ)

| ನಿಯತಾಂಕಗಳು | 7-May | 8-May | 9-May | 10-May | 11-May |
|---|---|---|---|---|---|
| ಮಳೆ (ಮಿ ಮಿ) | 5 | 19 | 37 | 13 | 0 |
| ಗರಿಷ್ಠ ಉಷ್ಣಾಂಶ(ಡಿ.ಸೆ.) | 34 | 34 | 35 | 34 | 32 |
| ಕನಿಷ್ಠ ಉಷ್ಣಾಂಶ (ಡಿ.ಸೆ.) | 22 | 22 | 23 | 21 | 21 |
| ಮೋಡ (ಪ್ರಮಾಣ) | 3 | 4 | 4 | 4 | 5 |
| ಅರ್ದ್ರತೆ ೭.೨೦ ಬೆ (ಶೇ) | 71 | 79 | 72 | 79 | 79 |
| ಅರ್ದ್ರತೆ ೨.೨೦ ಮ (ಶೇ) | 36 | 42 | 63 | 69 | 48 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 5 | 4 | 6 | 4 | 5 |
| ಗಾಳಿಯ ದಿಕ್ಕು (ಡಿಗ್ರಿ) | 140 | 95 | 140 | 230 | 250 |

ಭಾರತೀಯ ಹವಾಮಾನ ಇಲಾಖೆಯ ಸಮೀಕ್ಷೆಯ ಪ್ರಕಾರ ಮುಂದಿನ ಐದು ದಿನಗಳಲ್ಲಿ ತುಮಕೂರು ಹಾಗೂ ಸುತ್ತಮುತ್ತ ಹಗುರದಿಂದ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ವರದಿಯ ಪ್ರಕಾರ ತಿಳಿದುಬರುತ್ತದೆ. ದಿನದ ಗರಿಷ್ಠ ಉಷ್ಣಾಂಶ **32.0-35.0°C** ಮತ್ತು ಕನಿಷ್ಠ **21-23°C** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **71-79 %** ಇದ್ದು, ಮಧ್ಯಾಹ್ನ **36-69 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **4-6** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

**ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ**

- ✓ ಮಳೆ ಆಗಿರುವ ಕಡೆಯಲ್ಲಿ ಕೃಷಿ ಭೂಮಿಯನ್ನು ಆಳವಾಗಿ ಉಳುಮೆ ಮಾಡಬೇಕು. ಹಾಗೆ ಮಾಡುವುದರಿಂದ ನೀರು ಮಣ್ಣಿನಲ್ಲಿ ಚೆನ್ನಾಗಿ ಹಿಂಗುತ್ತದೆ ಹಾಗೂ ಕೀಟ ಹಾಗೂ ರೋಗ ಭಾದೆ ಕಡಿಮೆಯಾಗುತ್ತದೆ.

**ಮೇ ತಿಂಗಳಲ್ಲಿ ಬೆಳೆಯಬಹುದಾದ ತಳಿಗಳು:**

ಬಿತ್ತನೆಗೆ ಬೇಕಾದ ಉತ್ತಮ ಗುಣಮಟ್ಟದ ಬೀಜಗಳನ್ನು ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಕೃಷಿ ವಿಜ್ಞಾನ ಕೇಂದ್ರದಲ್ಲಿ ಖರೀದಿಸಲು ಸೂಚಿಸಲಾಗಿದೆ.

**ರಾಗಿ:** ಇಂಡಾಫ್ಲ್ ೯, ಎಮ್ ಆರ್-೧.೬. ಎಮ್ ಎಲ್ ೩೬೫, **ಅಲಸಂದೆ:** ಟಿ.ವಿ.ಎಕ್ಸ್-944, ಕೆ.ಬಿ.ಸಿ- 1, **ಉದ್ದು:** ಕರೆಗಾಂವ್-೩, ಟಿ-9, ರಶ್ಮಿ. **ಶಕ್ತಿಮಾನ್ ಮುಸುಕಿನ ಜೋಳ:** ಸಿ.ಎಸ್.ಹೆಚ್-೫, ಸಿ.ಎಸ್.ಹೆಚ್-೯. **ಅವರೆ:** ಹೆಚ್,ಎ.-೩, ಹೆಚ್,ಎ.-೪.

**ತೋಟಗಾರಿಕೆ ಬೆಳೆಗಳು:** ಬಾಳೆ, ಬೆಂಡೆ, ತಿಂಗಳ ಅವರೆ, ಶುಂಠಿ. ಅರಿಶಿಣ, ಆಲೂಗಡ್ಡೆ.

**ತೊಗರಿ:** ಬಿ.ಆರ್.ಜಿ-೧,೨, ಹೈದರಾಬಾದ್ ೩ಸಿ, ಟಿಟಿಬಿ ೭ ತಳಿಗಳು ಉತ್ತಮ

ತರಕಾರಿ ಬೆಳೆಗಳಲ್ಲಿ ಕಂಡುಬರುವ ಬೂಜು ರೋಗ ನಿಯಂತ್ರಣಕ್ಕೆ ರಿಡೊಮಿಲ್/**Ridomil**+ಮ್ಯಾಂಕೊಜೆಬ್ (2 ಗ್ರಾಂ/ಪ್ರತಿ ಲೀಟರ್ ನೀರಿಗೆ) ಬೆರೆಸಿ ಸಿಂಪಡಿಸುವುದು.

ಮಳೆ ಬರುವ ಸೂಚನೆ ಕಂಡುಬಂದರೆ ಔಷಧಿ ಸಿಂಪರಣೆ ಮಾಡಬೇಡಿ.

- ➢ ದಿನೇ ದಿನೇ ಬಿಸಿಲಿನ ಝಳ ಹೆಚ್ಚಾಗುತ್ತಿರುವುದರಿಂದ ತರಕಾರಿ ಬೆಳೆಗಳಿಗೆ ಹೆಚ್ಚಿನ ನೀರನ್ನು ಪೂರೈಸಬೇಕು.
- ➢ ರಸ ಹೀರುವ ಕೀಟಗಳ ಹಾವಳಿ ಜಾಸ್ತಿ ಇರುವುದರಿಂದ 5% ಬೇವಿನ ಕಷಾಯ ಅಥವಾ ಇಮಿಡಾಕ್ಲೋಪ್ರಿಡ್ ಸಿಂಪಡಿಸಿ.

**ಚೆಂಡು ಹೂ:** ಕೆಲವು ಕಡೆ ಪೋಷಕಾಂಶಗಳ ಕೊರತೆಯಿಂದ ಎಲೆಗಳು ಕಂದು ಅಥವಾ ಹಳದಿ ಬಣ್ಣಕ್ಕೆ ತಿರುಗುತ್ತವೆ. ಹತೋಟಿ ಮಾಡಲು ಬಂಯೋ-೨೦ ಸಿಂಪಡಿಸಬೇಕು ಅಥವಾ ಭೂಮಿಶಕ್ತಿ ಅಥವಾ ಮಹಾಫ್ಲೀಡ್ ಅನ್ನು ಹನಿ ನೀರಾವರಿ ಮೂಲಕ ಕೊಡಬೇಕು.

➢ **ಜಾನುವಾರು ನಿರ್ವಹಣೆ:** ಹಸುಗಳನ್ನು ನೆರಳಿನಲ್ಲೇ ಬಿಡಬೇಕು, ಶುದ್ಧ ನೀರನ್ನು ಕುಡಿಸಿ, ಕೊಟ್ಟಿಗೆಗಳನ್ನು ತಂಪಾಗಿ ಇಟ್ಟುಕೊಳ್ಳುವುದು ದನಕರುಗಳಿಗೆ ಕಾಲುಬಾಯಿಜ್ವರ ರೋಗದ ಭೀತಿ ಇರುವುದರಿಂದ ಅಗತ್ಯ ಮುನ್ನೆಚ್ಚರಿಕೆ ಕ್ರಮವಹಿಸಿ ಲಸಿಕೆ ಹಾಕಿಸುವುದು ಅತಿ ಅವಶ್ಯಕ.

**ನೋಡಲ್ ಅಧಿಕಾರಿ:**

**ಬೆಂಗಳೂರು**